# 2024 ಚುನಾವಣಾ ಮೈತ್ರಿ: ಬಿಜೆಪಿ ತ್ರಿವಿಧ ಸೂತ್ರ


ಭಾರತೀಯ ಜನತಾ ಪಕ್ಷ(ಬಿಜೆಪಿ) ಈ ಬಾರಿಯ ಲೋಕಸಭಾ ಚುನಾವಣೆಗೆ ಈವರೆಗೆ 405 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಒಟ್ಟು 6 ಪಟ್ಟಿಗಳಲ್ಲಿ ಪ್ರಕಟಿಸಿದೆ. ಅಲ್ಲದೇ, ಎನ್‌ಡಿಎ ಮೈತ್ರಿಕೂಟದ ಮಿತ್ರಪಕ್ಷಗಳಿಗೆ ನಿಗದಿತ ಕ್ಷೇತ್ರಗಳ ಕೋಟಾವನ್ನೂ ನೀಡಿದೆ.

2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ 2024ರ ಚುನಾವಣೆಯತ್ತ ಬಿಜೆಪಿಯ ನೋಟ ವಿವಿಧ ಕಾರಣಗಳಿಂದಾಗಿ ಬಲು ಭಿನ್ನವಾಗಿದೆ. ಉದಾಹರಣೆಗೆ ಹೇಳುವುದಾದರೆ, ಎನ್‌ಡಿಎ ಮೈತ್ರಿಕೂಟದಿಂದ ಕೆಲ ಪಕ್ಷಗಳು (ಶಿವಸೇನೆ) ಹೊರಹೋಗಿವೆ. ಅದಕ್ಕೆ ಬದಲಾಗಿ ಹೊಸಮಿತ್ರ ಪಕ್ಷಗಳನ್ನು ಮೈತ್ರಿಕೂಟಕ್ಕೆ ಬಿಜೆಪಿ ಬರಮಾಡಿಕೊಂಡಿದೆ. ಕಾರಣಾಂತರ ದೂರವಾಗಿದ್ದ ಹಳೆಯ ಮಿತ್ರಪಕ್ಷಗಳನ್ನು(ಜೆಡಿಯು, ಟಿಡಿಪಿ) ಮರಳಿ ಬರಮಾಡಿಕೊಳ್ಳಲಾಗಿದೆ. ಕೆಲ ಮಿತ್ರಪಕ್ಷಗಳು (ಎಸ್‌ಎಡಿ) ಭಿನ್ನಾಭಿಪ್ರಾಯ ಕಾರಣ ಅಂತರ ಕಾಯ್ದುಕೊಂಡಿವೆ.

ಬಹಳ ಲೆಕ್ಕಾಚಾರ ಹಾಕಿ ಮೈತ್ರಿಕೂಟಕ್ಕೆ ಹೊಸ ಶಕ್ತಿ ತುಂಬಿರುವ ಬಿಜೆಪಿ ರಾಜಕೀಯ ನಿಪುಣರು, 2024ರ ಚುನಾವಣೆಗೆ ಹೊಸತೇ ಆದ ಸೂತ್ರ ರೂಪಿಸುತ್ತಿದ್ದಾರೆ. ಹಾಗಾಗಿಯೇ ಬಲು ಆತ್ಮವಿಶ್ವಾಸದಿಂದ ಇರುವ ಕಮಲ ಪಡೆ, ಸವಾಲುಗಳನ್ನು ಬಹಳ ಲೆಕ್ಕಾಚಾರದಿಂದ ಎದುರಿಸಲು ಸಜ್ಜಾಗಿದೆ. ಆದರೆ, ತೀರಾ ಕಠಿಣ ಎನಿಸುವಂತಹ ಸವಾಲುಗಳ ಬಗ್ಗೆ ಬೇರೆಯದೇ ಲೆಕ್ಕಾಚಾರ ಇಟ್ಟುಕೊಂಡಿದೆ.

ಕಮಲ ಪಕ್ಷದ ಈ ತ್ರಿವಿಧ ಸೂತ್ರವನ್ನು ಮೂರು ರಾಜ್ಯಗಳಲ್ಲಿನ ಚುನಾವಣಾ ರಾಜಕಾರಣದ ಪರಿಸ್ಥಿತಿ ಮೂಲಕ ಅರ್ಥ ಮಾಡಿಕೊಳ್ಳಬಹುದು.


## ದೆಹಲಿ ಭಾರೀ ಆತ್ಮವಿಶ್ವಾಸ




ದೆಹಲಿಯಲ್ಲಿ ಲೋಕಸಭಾ ಚುನಾವಣೆಗೆ ಬಿಜೆಪಿ ವಿರುದ್ಧ ಎಎಪಿ-ಕಾಂಗ್ರೆಸ್ ಸೀಟು ಹೊಂದಾಣಿಕೆ ಮಾಡಿಕೊಂಡು ತೊಡೆ ತಟ್ಟಿದ್ದರೂ ಬಿಜೆಪಿ ಮಾತ್ರ ಗೆಲುವಿನ ಬಗ್ಗೆ ಭಾರೀ ಆತ್ಮವಿಶ್ವಾಸದಿಂದಿದೆ. ಎಎಪಿ-ಕಾಂಗ್ರೆಸ್ ಸೀಟು ಹೊಂದಾಣಿಕೆ ಪ್ರಕಟಿಸಿದ ಸಂದರ್ಭದಲ್ಲೇ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿತು. ಇದರ ಪರಿಣಾಮವೇನಾಯಿತೆಂದರೆ ಇಂಡಿಯ ಒಕ್ಕೂಟದ ಉಳಿದ ಪಕ್ಷಗಳೂ ದೆಹಲಿಯಲ್ಲಿನ ಎಎಪಿ-ಕಾಂಗ್ರೆಸ್ ಮೈತ್ರಿಗೆ ಬೆಂಬಲವಾಗಿ ನಿಂತವು. ಬಿಜೆಪಿ ವಿರುದ್ಧ ಪ್ರಬಲ ಪೈಪೋಟಿಗೆ ತೋಳೇರಿಸಿದವು. ಕೇಜ್ರಿವಾಲ್ ಬಂಧನ ಕಾನೂನಾತ್ಮಕವಾದುದು. ಹಾಗೆ ಮಾಡುವುದಕ್ಕೆ ಇ.ಡಿ ಬಳಿ ಸಾಕ್ಷ್ಯಾಧಾರಗಳೂ ಇವೆ. ಅದೇನೂ ಸಂಪೂರ್ಣ ರಾಜಕೀಯ ಪ್ರೇರಿತವಾದುದಲ್ಲ ಎಂಬುದನ್ನು ಮತದಾರರಿಗೆ ಮನದಟ್ಟು ಮಾಡಿಸಲು ಬಿಜೆಪಿಗೆ ಅವಕಾಶವಿದೆ. ಅಲ್ಲದೇ, ಎಎಪಿಯ ಬೆಂಬಲಿಗರೂ, ಮತದಾರರೂ ಕೂಡ ರಾಷ್ಟ್ರ ಮಟ್ಟದ ಚುನಾವಣೆ ವಿಚಾರ ಬಂದಾಗ ಬಿಜೆಪಿಗೇ ಮತ ಚಲಾಯಿಸುತ್ತಾರೆ, ಅದೆಂತಹುದೇ ಸಂದರ್ಭ ಬಂದರೂ ಈ ನಿರ್ಧಾರ ಬದಲಿಸುವುದಿಲ್ಲ ಎಂಬುದೂ ಕೆಲ ಅಂಕಿ ಅಂಶಗಳಿಂದ ತಿಳಿದುಬಂದಿದೆ. ಅದಷ್ಟೇ ಅಲ್ಲದೇ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ ಗಳಿಕೆ ಪ್ರಮಾಣ ದೆಹಲಿಯಲ್ಲಿ ಶೇ.50ಕ್ಕಿಂತಲೂ ಅಧಿಕವಾಗಿದೆ ಎಂಬ ಅಂಕಿ ಅಂಶ 2019ರ ಚುನಾವಣೆಯಲ್ಲಿ ದೃಢಪಟ್ಟಿದೆ. ಇದೆಲ್ಲಾ ಅಂಶಗಳೂ ದೆಹಲಿ ಯಲ್ಲಿ ಬಿಜೆಪಿ ಆತ್ಮವಿಶ್ವಾಸ ಹೆಚ್ಚಲು ಕಾರಣವಾಗಿವೆ. ಕೇಜ್ರಿವಾಲ್ ಬಂಧನದ ನೈಜ ರಾಜಕೀಯ ಪರಿಣಾಮಗಳನ್ನು ಬಿಜೆಪಿ ಎದುರಿಸಬೇಕಿರುವುದು ಈಗಲ್ಲ, 2025ರಲ್ಲಿ ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ. ಅಗ ಬಿಜೆಪಿ ಪಾಲಿಗೆ ನಿಜವಾದ ಅಗ್ನಿಪರೀಕ್ಷೆ.


ಅಂದರೆ, ದೆಹಲಿ ಸಾಮಾನ್ಯ ಮತದಾರ ಕೂಡಾ ಚುನಾವಣೆ ವಿಚಾರ ಬಂದಾಗ ರಾಜ್ಯ ಮತ್ತು ರಾಷ್ಟ್ರ ಮಟ್ಟಕ್ಕೆ ಸಂಬಂಧಿಸಿ ಭಿನ್ನವಾಗಿಯೇ ಆಲೋಚಿಸುತ್ತಾನೆ. ರಾಜ್ಯ ವಿಚಾರದಲ್ಲಿ ಎಎಪಿ, ರಾಷ್ಟ್ರಕ್ಕೆ ಸಂಬಂಧಿಸಿ ಬಿಜೆಪಿಗೆ ಮತ ಚಲಾಯಿಸುತ್ತಾನೆ ಎಂಬುದು ಅಂಕಿ ಅಂಶಗಳಿಂದ ತಿಳಿದುಬಂದಿದೆ. ಬಿಜೆಪಿ ಜಾರ್ಖಂಡ್ ರಾಜ್ಯದಲ್ಲಿಯೂ ಇದೇ ಬಗೆಯ ತಂತ್ರಗಾರಿಕೆಯನ್ನು ಕೈಗೊಂಡಿದೆ. ಅಲ್ಲಿಯೂ ಮುಖ್ಯಮಂತ್ರಿ ಹೇಮಂತ್ ಸೋರೆನ್ ಭ್ರಷ್ಟಾಚಾರ ಆರೋಪದಡಿ ಬಂಧನಕ್ಕೆ ಒಳಗಾಗಿದ್ದಾರೆ. ಆದರೆ, ಒಂದೇ ಬದಲಾವಣೆ ಎಂದರೆ, ಬಂಧನಕ್ಕೂ ಮುನ್ನ ಪದವಿಗೆ ರಾಜೀನಾಮೆ ನೀಡಿದ್ದಾರೆ.

## ಬಿಹಾರ ಕಠಿಣ ಸವಾಲು




ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜನತಾ ದಳ-ಸಂಯುಕ್ತ(ಜೆಡಿಯು) 4ನೇ ಬಾರಿಗೆ ಜಿಗಿದಾಟ ಮುಂದುವರೆಸಿದ್ದು, ಕಳೆದ ಜನವರಿಯಲ್ಲಿ ಮತ್ತೆ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಗೊಂಡಿದೆ. ಜೆಡಿಯು ಈಗ ಎನ್‌ಡಿಎಗೆ ಮರಳಿರುವುದು ಬಿಹಾರದಲ್ಲಿನ ಬಿಜೆಪಿ ನಾಯಕರು, ಪಕ್ಷದ ರಾಜ್ಯ ಪದಾಧಿಕಾರಿಗಳಿಗಂತೂ ಹಿತವೆನಿಸಿಲ್ಲ. 2022ರಲ್ಲಿ ಎನ್‌ಡಿಎ ತೊರೆದ ಜೆಡಿಯು, ಲಾಲೂ ಪ್ರಸಾದ್ ಯಾದವ್ ನೇತೃತ್ವದ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ)ದ ಜತೆಗೆ ಕೈಜೋಡಿಸಿ ರಾಜ್ಯದಲ್ಲಿ ಸರಕಾರವನ್ನೂ ರಚಿಸಿದಾಗಿನಿಂದಲೂ ಜೆಡಿಯು ವಿರುದ್ಧ ವಾಗ್ದಾಳಿ ನಡೆಸುತ್ತಾ ಬಂದಿರುವ ಬಿಜೆಪಿಯ ರಾಜ್ಯ ನಾಯಕರಿಗೀಗ ಇಕ್ಕಟ್ಟು. 2022ರಲ್ಲಿ ಜೆಡಿಯು ದೂರವಾದಾಗ ಬಿಜೆಪಿ ವರಿಷ್ಠರೇ ಹೇಳಿದ್ದರು, 'ವಿಶ್ವಾಸಘಾತ ಮಾಡಿದ ನಿತೀಶ್ ಕುಮಾರ್ ಮತ್ತು ಜೆಡಿಯು ಪಕ್ಷವನ್ನು ಇನ್ನೆಂದಿಗೂ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವುದಿಲ್ಲ' ಎಂದು. ಆದರೆ, ಈಗ ಆಗಿದ್ದೇ ಬೇರೆ. ಸದ್ಯ ಲೋಕಸಭಾ ಚುನಾವಣೆಯಲ್ಲಿ 16 ಕ್ಷೇತ್ರಗಳನ್ನು ಜೆಡಿಯುಗೆ ಬಿಟ್ಟುಕೊಡಲು ಬಿಜೆಪಿ ಸಮ್ಮತಿಸಿದೆ. ವಿಧಾನಸಭೆಯಲ್ಲಿ ಜೆಡಿಯು ಪಕ್ಷದ ಬಲಾಬಲ ಬಿಜೆಪಿಗಿಂತಲೂ ಕಡಿಮೆ ಇದೆ. ಹಾಗಿದ್ದೂ ಲೋಕ ಕ್ಷೇತ್ರಗಳಲ್ಲಿ ದೊಡ್ಡ ಪಾಲೇ ಅದಕ್ಕೆ ಸಿಕ್ಕಂತಾಗಿದೆ. ಜೆಡಿಯು ವಿಚಾರದಲ್ಲಿ ಬಿಜೆಪಿ ನಡೆ ಹೀಗೇಕೆ? ಎಂಬ ಪ್ರಶ್ನೆಗೆ, 2015ರ ವಿಧಾನಸಭೆ ಚುನಾವಣಾ ಫಲಿತಾಂಶದಲ್ಲಿ ಸಿಗುತ್ತದೆ. ಆಗಿನ ಚುನಾವಣೆಯಲ್ಲಿ ಜೆಡಿಯು, ಆರ್‌ಜೆಡಿ ಮತ್ತು ಕಾಂಗ್ರೆಸ್ ಒಟ್ಟುಗೂಡಿ ಚುನಾವಣಾ ಕಣಕ್ಕೆ ಧುಮಿಕಿದ್ದವು. ಬಿಜೆಪಿ ಏಕಾಂಗಿ ಹೋರಾಟ ನಡೆಸಿ ಹೀನಾಯ ಸ್ಥಿತಿಗೆ ತಲುಪಿತ್ತು. ಅದೇ, 2014ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ, ಆರ್‌ಜೆಡಿ ಮತ್ತು ಆರ್‌ಜೆಡಿ ಬೇರೆ ಬೇರೆ ಮೈತ್ರಿಕೂಟ ಗಳಲ್ಲಿ ಚುನಾವಣೆ ಎದುರಿಸಿದ್ದವು. ಬಿಜೆಪಿ ಭಾರೀ ಜಯಭೇರಿ ಭಾರಿಸಿತ್ತು. ರಾಜ್ಯ ಮತ್ತು ರಾಷ್ಟ್ರದ ವಿಚಾರ ಬಂದಾಗ ಬಿಹಾರದ ರಾಜಕೀಯ ಲೆಕ್ಕಾಚಾರ ಹೇಗೆ ನಡೆಯುತ್ತದೆ ಎಂಬುದನ್ನು ಬಿಜೆಪಿಗೆ ಮನದಟ್ಟು ಮಾಡಿ ಕೊಟ್ಟಿತು. ಹಾಗಾಗಿಯೇ ಈ ಬಾರಿಯ ಲೋಕ ಸಭಾ ಚುನಾವಣೆ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಜೆಡಿಯು ವಿಚಾರದಲ್ಲಿ ಬಿಜೆಪಿ ತುಸು ಹೆಚ್ಚೇ ದಾರಾಳತನ ತೋರಿದೆ. ಹಾಗೆ ಮಾಡದೇ ಇದ್ದರೆ, ಜೆಡಿಯು, ಆರ್‌ಜೆಡಿ ಜತೆಗೇ ಮೈತ್ರಿ ಮುಂದುವರಿಸಿದರೆ ಬಿಹಾರದಲ್ಲಿ ಲೋಕ ಗೆಲ್ಲುವುದು ಕಷ್ಟವಾಗಲಿದೆ ಎಂಬ ಸಂಗತಿ ಬಿಜೆಪಿ ಮಸ್ತಿಷ್ಕದಲ್ಲಿದೆ. ಬಿಹಾರದಂತಹುದೇ ಭಿನ್ನ ಎನಿಸುವಂತಹ ರಾಜಕಾರಣ ಮಹಾರಾಷ್ಟ್ರದಲ್ಲೂ ಕಾಣಸಿಗುತ್ತದೆ. ಮರಾಠ ನೆಲದಲ್ಲಿ ಶಿವಸೇನೆ ಮತ್ತು ಎನ್‌ಸಿಪಿ ಬಣಗಳ ಜತೆಗಿನ ಮೈತ್ರಿ ರಾಜಕಾರಣವೂ ತುಸು ಹೆಚ್ಚೇ ಜಾಗ್ರತೆ ವಹಿಸಬೇಕಾದ ರೀತಿಯದ್ದಾಗಿದೆ.

## ತಮಿಳುನಾಡು: ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಸಾಧನೆ




## ಮೈತ್ರಿ ಬದಲು ಅಭಿವೃದ್ಧಿ ಮಂತ್ರ

ಈ ರಾಜಕೀಯ ತಂತ್ರ ಪ್ರಯೋಗಕ್ಕೆ ತಮಿಳುನಾಡು ರಾಜ್ಯವೇ ದೊಡ್ಡ ರಾಜ್ಯ. 2019 ಲೋಕಸಭೆ ಮತ್ತು 2021ರಲ್ಲಿ ವಿಧಾನಸಭೆ ಚುನಾವಣೆಯನ್ನು ಈ ರಾಜ್ಯದಲ್ಲಿ ಅತಿದೊಡ್ಡ ದ್ರಾವಿಡ ಸಮುದಾಯದ ಪಕ್ಷಗಳಲ್ಲೊಂದಾದ 'ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ' (ಎಐಎಡಿಎಂಕೆ) ಜತೆಗೂಡಿ ಬಿಜೆಪಿ ಎದುರಿಸಿತ್ತು. ಆದರೆ, ಆ ಎರಡೂ ಚುನಾವಣೆಗಳಲ್ಲಿ ಮತ್ತೊಂದು ದ್ರಾವಿಡ ಪಕ್ಷ 'ದ್ರಾವಿಡ ಮುನ್ನೇತ್ರ ಕಳಗಂ'(ಡಿಎಂಕೆ) ಮೈತ್ರಿಕೂಟ ಭರ್ಜರಿ ಜಯ ಸಾಧಿಸಿತ್ತು. ಈ ಎರಡೂ ಚುನಾವಣೆಗಳ ಫಲಿತಾಂಶವು ರಾಜ್ಯದಲ್ಲಿನ ಮತ ಧ್ರುವೀಕರಣದ ಲೆಕ್ಕಾಚಾರಗಳನ್ನು ಬಿಜೆಪಿಗೆ ಮನದಟ್ಟು ಮಾಡಿಕೊಟ್ಟಿತು. ಬಳಿಕ ಬಿಜೆಪಿ ತನ್ನದೇ ಆದ ಮತ ಬ್ಯಾಂಕ್ ಸೃಷ್ಟಿಸಿಕೊಳ್ಳಲು ಯೋಚಿಸಿತು. ಕಡಿಮೆ ಸ್ಥಾನ ಗೆದ್ದರೂ ಪರವಾಗಿಲ್ಲ. ರಾಜ್ಯದಲ್ಲಿ ತನ್ನದೇ ಆದ ಓಟ್‌ಬ್ಯಾಂಕ್ ಸೃಷ್ಟಿಸಿಕೊಳ್ಳಬೇಕು, ನಿಧಾನವಾಗಿಯಾದರೂ ಮತಪ್ರಮಾಣ ಹೆಚ್ಚಿಸಿಕೊಳ್ಳಬೇಕು ಎಂಬ ಗುರಿ ಇಟ್ಟುಕೊಂಡು ಏಕಾಂಗಿ ಹೋರಾಟಕ್ಕೆ ಮನಸ್ಸು ಮಾಡಿದೆ. ಮೈತ್ರಿಗೆ ಆದ್ಯತೆ ನೀಡಲು ಹೋಗಿಲ್ಲ. ಬೇರು ಬಿಡಲೂ ಸಾಧ್ಯವಾಗದ ದಕ್ಷಿಣ ಭಾರತದ ಈ ರಾಜ್ಯದಲ್ಲಿ ತನ್ನ ಕೋರ್ ಅಜೆಂಡಾವನ್ನೇ ಮುಂದಿಟ್ಟುಕೊಂಡು ಏಕಾಂಗಿ ಹೋರಾಟಕ್ಕೆ ಭಿನ್ನ ಯೋಜನೆ ರೂಪಿಸಿಕೊಳ್ಳುತ್ತಿದೆ.

# ವಿಶ್ವ ಸುಂದರಿ ಸ್ಪರ್ಧೆ: ಮೊದಲ ಬಾರಿ ಸೌದಿ ಭಾಗಿ



**ರಿಯಾದ್:** ಸೌದಿ ಅರೇಬಿಯ ಇದೇ ಮೊದಲ ಬಾರಿಗೆ ಮಿಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಭಾಗಿಯಾಗುತ್ತಿದೆ. ಸೌದಿಯ ಹಿರಿಯ ಬ್ಯೂಟಿ ಪೆಜೆಂಟ್ ರೂಮಿ ಅಲ್ಕಹ್ತಾನಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಈ ಮಾಹಿತಿ ಹಂಚಿಕೊಂಡಿದ್ದಾರೆ. ಅಲ್ಲದೇ, ತಮ್ಮ ದೇಶ ಸೌದಿ ಅರೇಬಿಯವನ್ನು ತಾವು ಪ್ರತಿನಿಧಿಸುವುದಾಗಿ ತಿಳಿಸಿದ್ದಾರೆ.

'ಮಿಸ್ ಯೂನಿವರ್ಸ್-2024 ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತಿದೆ. ಇದು ವಿಶ್ವಸುಂದರಿ ಸ್ಪರ್ಧೆಯಲ್ಲಿ ಸೌದಿ ಅರೇಬಿಯ ದೇಶದ ಮೊದಲ ಭಾಗವಹಿಸುವಿಕೆ ಇದು' ಎಂದು ಅರೇಬಿಕ್ ಭಾಷೆಯಲ್ಲಿ ಬರೆದಿದ್ದಾರೆ.

ರಿಯಾದ್‌ನಲ್ಲಿ ಜನಿಸಿದ ಅಲ್ಕಹ್ತಾನಿ ಕೆಲ ವಾರಗಳ ಹಿಂದೆ ಮಲೇಷ್ಯಾದಲ್ಲಿ ನಡೆದ ಮಿಸ್ ಅಂಡ್ ಮಿಸೆಸ್ ಗ್ಲೋಬಲ್ ಏಷ್ಯನ್ ಸ್ಪರ್ಧೆ ಸೇರಿದಂತೆ ಹಲವು ಜಾಗತಿಕ ಮಟ್ಟದ ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಖಲೀಜ್ ಟೈಮ್ಸ್ ವರದಿ ಪ್ರಕಟಿಸಿದೆ. ಕಳೆದ ವರ್ಷ, ಮಿಸ್ ನಿಕರಾಗುವಾ ಶೆನ್ನಿಸ್ ಪಲಾಸಿಯೊಸ್-2023ರ ವಿಶ್ವ ಸುಂದರಿ ಕಿರೀಟ ಪಡೆದಿದ್ದರು. ಮುಂದಿನ ಆವೃತ್ತಿಯನ್ನು ಮೆಕ್ಸಿಕೋದಲ್ಲಿ ನಡೆಸಲಾಗುವುದೆಂದು ಆಯೋಜಕರು ಘೋಷಿಸಿದ್ದರು.

# ಪಿಣರಾಯಿ ಪುತ್ರಿ ವಿರುದ್ಧ ದೂರು: ಇ.ಡಿ



**ಕೊಚ್ಚಿ:** ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ವಿಜಯನ್ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಅಕ್ರಮ ಹಣ ವರ್ಗಾವಣೆ ದೂರು ದಾಖಲಿಸಿದೆ. ಖಾಸಗಿ ಖನಿಜ ಕಂಪನಿಯಿಂದ ಅಕ್ರಮವಾಗಿ ಹಣ ಪಡೆದ ಆರೋಪ ಕೇಳಿಬಂದಿದ್ದರಿಂದ ಕೇಂದ್ರ ತನಿಖಾ ಸಂಸ್ಥೆ ಕ್ರಮ ಕೈಗೊಂಡಿದೆ. ವೀಣಾ ಒಡೆತನದ ಕೊಚ್ಚಿನ ಮಿನರಲ್ಸ್ ಮತ್ತು ರುಟೇಲ್ ಲಿ. ಕಂಪನಿಗಳಿಂದ ಯಾವುದೇ ಸೇವೆ ಪಡೆಯದೇ ಇದ್ದರೂ ಖಾಸಗಿ ಖನಿಜ ಕಂಪನಿ ವೀಣಾ ಅವರಿಗೆ 1.72 ಕೋಟಿ ರು. ಪಾವತಿಸಿದೆ ಎಂದು ಕೇಂದ್ರ ಕಂಪನಿ ವ್ಯವಹಾರಗಳ ಸಚಿವಾಲಯದ ಗಂಭೀರ ವಂಚನೆ ಪ್ರಕರಣಗಳ ತನಿಖಾ ವಿಭಾಗ ಸಲ್ಲಿಸಿದ ದೂರಿನ ಮೇರೆಗೆ ಇ.ಡಿ ಪ್ರಕರಣ ದಾಖಲಿಸಿಕೊಂಡಿದೆ. ವೀಣಾ ಸೇರಿದಂತೆ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರಿಗೂ ವಿಚಾರಣೆಗೆ ಹಾಜರಾಗುವಂತೆ ಸದ್ಯದಲ್ಲೇ ಸಮನ್ಸ್ ಜಾರಿಗೊಳಿಸಲಿದೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

### ಫೆಮಾ: ಮೊಯಿತ್ರಾಗೆ ಇ.ಡಿ ಸಮನ್ಸ್

**ದೆಹಲಿ:** ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ(ಫೆಮಾ) ಉಲ್ಲಂಘನೆ ಪ್ರಕರಣದಲ್ಲಿ ಗುರುವಾರ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ(ಇ.ಡಿ), ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ(49) ಮತ್ತು ಉದ್ಯಮಿ ದರ್ಶನ್ ಹಿರಾನಂದಾನಿಗೆ ಸಮನ್ಸ್ ಜಾರಿ ಮಾಡಿದೆ. ಸಂಸತ್ತಿನಿಂದ ವಜಾಗೊಂಡ ಸಂಸದೆಯನ್ನು ಸಂಸ್ಥೆ ವಿಚಾರಣೆಗೆ ಕರೆದಿತ್ತು.

**PUBLIC NOTICE**

My client **Sri Munikrishna N M,** R/at No.112, Neeleri Grama, Ward No.10, Devanahalli Town, Bangalore Rural District is the absolute owner of **Site No. 66,** PID No.150300200101401668, formed in old Katha No.51/66, situated at **Yellihuru Village, Gram Panchayat Kasaba Hobli Devanahalli Taluk, Bangalore Rural District**, measuring **East to West:12.19 Mtrs (40 Feet and North to South:9.14 Mtrs, (30 Feet) in all** measuring **111.48 Sq. Mtrs** and bounded by: **East:** Road, **West:** Private Property, **North:** Site No.67 and **South:** Site No.65.

My client has lost original documents viz **(1)** Sale Deed dated 04.12.2014 registered as Doc. No.7232/2014-15, **(2)** Sale Agreement dated 21.05.2015 registered as Doc. No.1484/2015-16, **(3)** Cancellation of Sale Agreement dated 30.05.2016 registered as Doc.No.1772/2016-17 pertaining to the above said property.

If anybody general public is having found/possession of the said title deeds may hand over to the under mentioned Advocate/Address.

It is hereby notified to the general public, Banks, societies, financial institutions that not to make any transaction upon the said lost documents, if done same will be treated as null and void. If any Individual is having any objections or having any rights or interest over the said property may lodge their objections and/or claims with the undersigned along with supporting documentary evidence ***within 7 days from*** the date of this public notice.

Sd/-
**GEETHA S, Advocate**
No.80, Ground Floor, 4th Cross, Jnaanakshi Layout, Rajarajeshwarinagar, Bangalore -560 098.
Mobile -9535887692 / 8971436184

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 188/2024

**ಅರ್ಜಿದಾರರು:** ಶ್ರೀಮತಿ ಚಿಕ್ಕಮ್ಮ ಕೋಂ ಲೇಟ್ ತಿಮ್ಮೇಗೌಡ ಕೆಬ್ಬೆರೆ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀಮತಿ ಪಾರ್ವತಮ್ಮ ಕೋಂ ಲೇಟ್ ತಿಮ್ಮೇಗೌಡ ರವರು ದಿನಾಂಕ 14.04.2018 ರಂದು ಕನಕಪುರ ತಾಲ್ಲೋಕು, ಕೋಡಿಹಳ್ಳಿ ಹೋಬಳಿ, ಹಂಚಗುಳಿ ಅಂಚೆ, ಕೆಬ್ಬೆರೆ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14.05.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 20ನೇ ಮಾರ್ಚ್ 2024ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಅಭಿಷೇಕ್.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ: 20.03.2024

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 187/2024

**ಅರ್ಜಿದಾರರು:** ಶ್ರೀಮತಿ ಚಿಕ್ಕಮ್ಮ ಕೋಂ ಲೇಟ್ ತಿಮ್ಮೇಗೌಡ ಕೆಬ್ಬೆರೆ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ ತಿಮ್ಮೇಗೌಡ ಬಿನ್ ಲೇಟ್ ತಿಮ್ಮೇಗೌಡ ರವರು ದಿನಾಂಕ 11.12.2007 ರಂದು ಕನಕಪುರ ತಾಲ್ಲೋಕು, ಕೋಡಿಹಳ್ಳಿ ಹೋಬಳಿ, ಹಂಚಗುಳಿ ಅಂಚೆ, ಕೆಬ್ಬೆರೆ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14.05.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 20ನೇ ಮಾರ್ಚ್ 2024ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಅಭಿಷೇಕ್.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ: 20.03.2024


## ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ಸಚಿವ ಜೈಶಂಕರ ಭೇಟಿ

# ದ್ವಿಪಕ್ಷೀಯ ಬಾಂಧವ್ಯ ಈಗ ಇನ್ನಷ್ಟು ವೃದ್ಧಿ

**ಕ್ವಾಲಾಲಂಪುರ:** ಸಚಿವ ಎಸ್. ಜೈಶಂಕರ್ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರನ್ನು ಭೇಟಿ ಮಾಡಿ, ದ್ವಿಪಕ್ಷೀಯ ಸಂಬಂಧದ ಕುರಿತು ಮಾತುಕತೆ ನಡೆಸಿದ್ದಾರೆ.

ಈ ಹಿಂದೆಯೇ ಮಲೇಷ್ಯಾದ ವಿದೇಶಾಂಗ ಸಚಿವ ಮೊಹಮದ್ ಬಿನ್ ಹಾಜಿ ಹಸನ್ ಅವರನ್ನು ಭೇಟಿ ಮಾಡಿ, ಚರ್ಚಿಸಿದ್ದ ಅವರು, ಉಭಯ ದೇಶಗಳ ರಾಜಕೀಯ, ಆರ್ಥಿಕ, ರಕ್ಷಣೆ, ಡಿಜಿಟಲ್, ಸ್ಟಾರ್ಟ್‌ಅಪ್ ಕ್ಷೇತ್ರಗಳಲ್ಲಿ ಸಹಯೋಗ ವೃದ್ಧಿ ಸೇರಿದಂತೆ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಂಡು ಈ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೆ ಇಂಡೋ-ಪೆಸಿಫಿಕ್, ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ಕುರಿತ ದೃಷ್ಟಿಕೋನಗಳನ್ನು ಹಂಚಿಕೊಳ್ಳಲಾಯಿತು ಎಂದು ಮಲೇಷ್ಯಾ ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಸಿಂಗಪುರ, ಫಿಲಿಪ್ಪೀನ್ಸ್, ಮಲೇಷ್ಯಾ ಪ್ರವಾಸದ ಮೂರನೇ ಹಾಗೂ ಕೊನೆಯ ದಿನದ ಪ್ರವಾಸದಲ್ಲಿ ಜೈಶಂಕರ್ ಕ್ವಾಲಾಲಂಪುರದಲ್ಲಿ ಇದ್ದಾರೆ.

> **ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಸಂಬಂಧಿಸಿದಂತೆ ಪ್ರಧಾನಿ ಅನ್ವರ್ ಉತ್ತಮ ದೃಷ್ಟಿಕೋನ ಹೊಂದಿದ್ದಾರೆ. ಸಾಂಪ್ರದಾಯಿಕ ಮತ್ತು ಹೊಸ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ಬಾಂಧವ್ಯ ವೃದ್ಧಿಗೆ ಮಹತ್ವಾಕಾಂಕ್ಷೆಯ ಕಾರ್ಯಸೂಚಿ ರೂಪಿಸಲು ನೆರವಾಗುತ್ತದೆ.**
> **-ಎಸ್ ಜೈಶಂಕರ್,** ವಿದೇಶಾಂಗ ವ್ಯವಹಾರ ಸಚಿವ



## ಕುಡಿತದಿಂದ ದೂರವಿರಿ: ಭರಣಿ

**ಬೆಂಗಳೂರು:** ದಲಿತ ಸಮುದಾಯವು ದೇವರು ಮತ್ತು ಕುಡಿತದಿಂದ ದೂರ ಇರದೇ ಹೋದರೆ ಉದ್ಧಾರವಾಗಲ್ಲ ಎಂದು ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ ತಿಳಿಸಿದರು. ಬುಧವಾರ ನಗರದಲ್ಲಿ ಕರ್ನಾಟಕ ರಿಪಬ್ಲಿಕನ್ ಸಂಘಟನೆಯನ್ನು (ಕೆಆರ್‌ಎಸ್) ಉದ್ಘಾಟಿಸಿ ಅವರು ಮಾತನಾಡಿ, ದೇವರು ಎಂಬುದು ಮನುಷ್ಯರ ಸೃಷ್ಟಿ. ಅದುವೇ ವೈದಿಕರ ಬಂಡವಾಳ ಎಂದು ಹೇಳಿದರು.

**ಸಾರ್ವಜನಿಕ ಪ್ರಕಟಣೆ**

ದಾಖಲಾತಿ ಕಳೆದಿದೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಹಾಸನ, ಜೀನೆನಹಳ್ಳಿ ಮೇಟ್ಟಿಕೆರೆಹಳ್ಳಿ, ಮಾರುತಿ ನಿಲಯ, ಹಿರೀಸಾವೆ ಹೋಬಳಿ ನಂ. 73 ರಲ್ಲಿ ವಾಸವಾಗಿರುವ ದಿವಂಗತ ರಂಗಪ್ಪ ನವರ ಮಗ **ದಿಲೀಪ್ ಕುಮಾರ್ ಆರ್,** ಸುಮಾರು 47 ವರ್ಷ ಆದ ನಾನು ದಿನಾಂಕ: 07.02.2024 ರಂದು ರಾಜರಾಜೇಶ್ವರಿ ನಗರ ಬೆಂಗಳೂರು ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣೆಯಾಗಿದ್ದ ನನ್ನ ಮನೆಯ ಒರಿಜಿನಲ್ ಡಾಕ್ಯುಮೆಂಟ್ ನಂ. KEN-1-35571-2003-04 CD NO. KEND2, ದಿನಾಂಕ 10-03-2004, ಈ ಮೂಲ ಪತ್ರವು ಕಳೆದು ಹೋಗಿರುತ್ತದೆ. ಈ ಬಗ್ಗೆ ದಿನಾಂಕ 20-03-2024 ರಂದು ಕರ್ನಾಟಕ ರಾಜ್ಯ ಪೋಲೀಸ್ ಕ್ರೈಮ್ ಬ್ರಾಂಚಿನಲ್ಲಿ ದೂರು ಸಲ್ಲಿಸಿದ್ದು ಅದರ ಲಾಸ್ಟ್ ರಿಪೋರ್ಟ್ ನಂ.0983350/2024, ಮೇಲೆ ತಿಳಿಸಿರುವ ಮೂಲ ದಾಖಲಾತಿಯು ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು ಈ ಕೆಳಗೆ ತಿಳಿಸಿರುವ ವಿಳಾಸಕ್ಕೆ ತಲುಪಿಸಬೇಕೆಂದು ವಿನಂತಿ.

**ದಿಲೀಪ್ ಕುಮಾರ್ ಆರ್**
ನಂ. 73, ಮಾರುತಿ ನಿಲಯ, ಮೇಟ್ಟಿಕೆರೆಹಳ್ಳಿ, ಜೀನೆನಹಳ್ಳಿ, ಹಿರೀಸಾವೆ ಹೋಬಳಿ, ಹಾಸನ.

## ಮೆದುಳು ಶಸ್ತ್ರಚಿಕಿತ್ಸೆ ಪಡೆದ ಜಗ್ಗಿ ವಾಸುದೇವ

# ಆಸ್ಪತ್ರೆಯಿಂದ ಬಿಡುಗಡೆಯಾದ ಸದ್ಗುರು

**ದೆಹಲಿ:** ಮಿದುಳು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಈಶಾ ಫೌಂಡೇಶನ್ ಸಂಸ್ಥಾಪಕ, ಆಧ್ಯಾತ್ಮಿಕ ಗುರು ಸದ್ಗುರು ಜಗ್ಗಿ ವಾಸುದೇವ್ ಖಾಸಗಿ ಆಸ್ಪತ್ರೆಯಿಂದ ಬುಧವಾರ ಬಿಡುಗಡೆಗೊಂಡಿದ್ದಾರೆ.

ಇತ್ತೀಚೆಗೆ ದೆಹಲಿಯ ಇಂದ್ರಪ್ರಸ್ಥದ ಅಪೋಲೋ ಆಸ್ಪತ್ರೆಯಲ್ಲಿ ತುರ್ತು ಮಿದುಳು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಜಗ್ಗಿ ವಾಸುದೇವ್ ಅವರು ಬುಧವಾರ ಖಾಸಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆಂದು ಈಶಾ ತಿಳಿಸಿದೆ. ಶಿವರಾತ್ರಿಗೂ ಮುನ್ನ ನಾಲ್ಕು ವಾರಗಳಿಂದ ತೀವ್ರ ತಲೆನೋವಿನಿಂದ ಬಳಲುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಹಿನ್ನಲೇ ಇಂದ್ರಪ್ರಸ್ಥ ಅಪೋಲೋ ಆಸ್ಪತ್ರೆಯಲ್ಲಿ ಅವರ ತಲೆಬುರುಡೆಯಲ್ಲಿ 'ಮಾರಣಾಂತಿಕ' ರಕ್ತಸ್ರಾವ ಉಂಟಾದ ನಂತರ ಮಾ. 17ರಂದು ಅವರಿಗೆ ಮಿದುಳಿನ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಸದ್ಗುರು ಅವರ ಶಸ್ತ್ರಚಿಕಿತ್ಸೆ ನೆರವೇರಿಸಿದ ವೈದ್ಯರ ತಂಡದ ನೇತೃತ್ವ ವಹಿಸಿದ್ದ ಆಸ್ಪತ್ರೆಯ ಹಿರಿಯ ಸಲಹೆಗಾರ ನರರೋಗ ತಜ್ಞ ವಿನಿತ್ ಸೂರಿ, ಸದ್ಗುರು ಅವರ ಜೀವಕ್ಕೆ ಕುತ್ತು ಉಂಟಾಗುವ ಪರಿಸ್ಥಿತಿ ಎದುರಾಗಿದೆ ಎಂದು ಹೇಳಿದ್ದರು. ಇದಾದ ನಂತರ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಬಿಡುಗಡೆಯಾಗಿದ್ದಾರೆ.



**SMFG INDIA CREDIT COMPANY LIMITED**
**(formerly Fullerton India Credit Company Limited)**
SMFG IndiaCredit Pragati Ki Nayi Pehchaan

ಕಾರ್ಪೊರೇಟ್ ಕಚೇರಿ: 10ನೇ ಮಹಡಿ, ಕಚೇರಿ ಸಂ. 101, 102 ಮತ್ತು 103, 2 ನಾರ್ತ್ ಅವೆನ್ಯು, ಮೇಕರ್ ಮ್ಯಾಕ್ಸಿಟಿ, ಬಾಂದ್ರಾಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ(ಪೂ), ಮುಂಬೈ-400051

ಸ್ವಾಧೀನತೆಯ ಸೂಚನೆ (ಸ್ಥಿರಾಸ್ತಿಗಳಿಗೆ)
(ನಿಯಮ 8(1)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002

ಕೆಳಸಹಿದಾರರು ಎಸ್‌ಎಂಎಫ್‌ಜಿ ಇಂಡಿಯ ಕ್ರೆಡಿಟ್ ಕಂಪನಿ ಲಿಮಿಟೆಡ್ (ಈ ಮೊದಲು ಫುಲ್ಲರ್ಟನ್ ಇಂಡಿಯ ಕ್ರೆಡಿಟ್ ಕಂಪನಿ ಲಿಮಿಟೆಡ್ ಎಂದಾಗಿತ್ತು) ತನ್ನ ನೋಂದಾಯಿತ ಕಚೇರಿಯನ್ನು ಮೇಫ್ ಟವರ್ಸ್, 3ನೇ ಮಹಡಿ, ಹಳೆ ನಂ. 307, ಹೊಸ ನಂ. 165, ಪಿಹೆಚ್ ರಸ್ತೆ, ಮಧುರವೋಯಲ್, ಚೆನ್ನೈ, ತಮಿಳುನಾಡು-600095 ಮತ್ತು ಕಾರ್ಪೊರೇಟ್ ಕಚೇರಿಯನ್ನು 10ನೇ ಮಹಡಿ, ಕಚೇರಿ ಸಂ. 101, 102 ಮತ್ತು 103, 2 ನಾರ್ತ್ ಅವೆನ್ಯು, ಮೇಕರ್ ಮ್ಯಾಕ್ಸಿಟಿ, ಬಾಂದ್ರಾಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ(ಪೂ), ಮುಂಬೈ-400051 ಇಲ್ಲಿ ಹೊಂದಿದ್ದು, ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 (2002 ರ 54) ನಿಯಮ 20002 ರ ಅಡಿ ಸೆಕ್ಷನ್ 13(12) ನಿಯಮ 3 ರ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ, 2002 ಅಡಿ 30.06.2023 ರಂದು ತಗಾದೆ ಸೂಚನೆಯನ್ನು ನೀಡಿದ್ದು, ಸಾಲಗಾರರಾದ 1. ಲ್ಯಾಂಡ್‌ಸ್ಟಾರ್ ಹೋಮ್ಸ್ 2. ಕೆ. ಉಮಾ ಮಹೇಶ್ವರ ರೆಡ್ಡಿ. 3. ಕುಮ್ಮೇತ ಸಬಿತ ಇವರಿಗೆ ಖಾತಾ ಸಂ. 212921311204584ರ ಅಡಿ 05.12.2023ರವರೆಗೆ ರೂ.79,25,384/- (ಎಪ್ಪತ್ತೊಂಭತ್ತು ಲಕ್ಷ ಇಪ್ಪತ್ತೈದು ಸಾವಿರದ ಮುನ್ನೂರ ಎಂಬತ್ತನಾಲ್ಕು ರೂಪಾಯಿ ಮಾತ್ರ) ವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಪಾವತಿಸುವಂತೆ ಸೂಚಿಸಲಾಗಿತ್ತು.

ಈ ಕೆಳಗೆ ಹೆಸರಿಸಿರುವ ಸಾಲಗಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕೆಳಸಹಿದಾರರು ಸೆಕ್ಷನ್ 13ರ ಸಬ್ ಸೆಕ್ಷನ್ (4) ರ ಅಡಿ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ 27ನೇ ಮಾರ್ಚ್ 2024ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಕೆಳಗೆ ಹೆಸರಿಸಿರುವ ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಎಸ್‌ಎಂಎಫ್‌ಜಿ ಇಂಡಿಯ ಕ್ರೆಡಿಟ್ ಕಂಪನಿ ಲಿಮಿಟೆಡ್ ಗೆ 05.12.2023ರವರೆಗೆ ಬರಬೇಕಾದ ಬಾಕಿ ರೂ.79,25,384/- (ಎಪ್ಪತ್ತೊಂಭತ್ತು ಲಕ್ಷ ಇಪ್ಪತ್ತೈದು ಸಾವಿರದ ಮುನ್ನೂರ ಎಂಬತ್ತನಾಲ್ಕು ರೂಪಾಯಿ ಮಾತ್ರ) ಹಾಗೂ ನಂತರದ ಬಡ್ಡಿಯನ್ನು ಪಾವತಿಸಬೇಕಾಗುವುದು.

ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಸೆಕ್ಷನ್ 13 ರ ಸಬ್‌ಸೆಕ್ಷನ್(8) ರ ಅನ್ವಯ ಬಾಕಿ ಉಳಿದ ಸಮಯಾವಕಾಶದಲ್ಲಿ ಭದ್ರತಾ ಆಸ್ತಿಗಳನ್ನು ಮರುಪಡೆದುಕೊಳ್ಳಬಹುದಾಗಿದೆ.

ಸ್ಥಿರಾಸ್ತಿಯ ವಿವರ: ಮೂಲ ಪರಿಶೀಲನೆಯ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, 5% ಪಾಲು ಅಪಾರ್ಟ್‌ಮೆಂಟ್ ನಂ. 027 ರ ನೆಲ ಮಹಡಿಯಲ್ಲಿದ್ದು, "ಪಿನಾಕಲ್" ಎಂದು ಕರೆಯಲಾಗುತ್ತಿದ್ದು, 1080 ಚ.ಅಡಿಗಳ ಎಸ್‌ಬಿಯು ಹೊಂದಿದ್ದು, ಜೊತೆಗೆ 360ಚ.ಅಡಿಗಳ ಯುಡಿಎಸ್ ಮತ್ತು 5% ಪಾಲು ಅಪಾರ್ಟ್‌ಮೆಂಟ್ ನಂ. 018, ನೆಲ ಮಹಡಿಯ ಅಪಾರ್ಟ್‌ಮೆಂಟ್‌ನ್ನು "ಪಿನಾಕಲ್" ಎಂದು ಕರೆಯಲಾಗುತ್ತಿದ್ದು, 1289 ಚ.ಅಡಿಗಳ ಎಸ್‌ಬಿಯು ಹೊಂದಿದ್ದು, ಜೊತೆಗೆ 429ಚ.ಅಡಿಗಳ ಯುಡಿಎಸ್ ಹೊಂದಿರುವ ಕಟ್ಟಡ "ಪಿನಾಕಲ್" ನ್ನು ಸರ್ವೆ ನಂ. 79/2 ಮತ್ತು 80/4 (ಪರಿವರ್ತಿತ ಆದೇಶ ನಂ. ಎಎಲ್‌ಎನ್(ಇ)ಎಸ್‌ಆರ್ 112/2009-10 ದಿನಾಂಕ 06.04.2010), ಒಟ್ಟು ವಿಸ್ತೀರ್ಣ 1 ಎಕರೆ 23 ಗುಂಟೆಗಳು ಹಿರಂಡಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಮೊದಲು ಬೆಂಗಳೂರು ದಕ್ಷಿಣ ತಾಲೂಕು ಪ್ರಸ್ತುತ ಬೆಂಗಳೂರು ಪೂರ್ವ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 78, ಪಶ್ಚಿಮಕ್ಕೆ: ಸರ್ವೆ ನಂ. 79/1 ಮತ್ತು 80/3, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ. 79/1.

ಸ್ಥಳ: ಬೆಂಗಳೂರು
ದಿನಾಂಕ: 28.03.2024
ಸಹಿ/- ಅಧಿಕೃತ ಅಧಿಕಾರಿ,
ಎಸ್‌ಎಂಎಫ್‌ಜಿ ಇಂಡಿಯ ಕ್ರೆಡಿಟ್ ಕಂಪನಿ ಲಿಮಿಟೆಡ್
(ಈ ಮೊದಲು ಫುಲ್ಲರ್ಟನ್ ಇಂಡಿಯ ಕ್ರೆಡಿಟ್ ಕಂಪನಿ ಲಿಮಿಟೆಡ್ ಎಂದಾಗಿತ್ತು)

**IndoStar Capital Finance Limited**
INDOSTAR
**Regd. Office:** - Silver Utopia, Third Floor, Unit No 301-A, Opposite P & G Plaza, Cardinal Gracious Road, Chakala, Andheri (E), Mumbai – 400099
**Branch Office** - NO.21, Raja Glitz, 1st Floor, Above Karnataka Bank, KH Road, Bangalore -560027

**ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ರ ಅಡಿ ಸ್ವತ್ತುಗಳ ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ**

ಕೆಳಸಹಿದಾರನಾದ ನಾನು ಮೆ॥ ಇಂಡೋಸ್ಟಾರ್ ಕ್ಯಾಪಿಟಲ್ ಫೈನಾನ್ಸ್ ಲಿ., ನ ಅಧಿಕೃತ ಅಧಿಕಾರಿಯಾಗಿ, ಈ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡುವುದೇನೆಂದರೆ, ಇಂಡೋಸ್ಟಾರ್ ಕ್ಯಾಪಿಟಲ್ ಫೈನಾನ್ಸ್ ಲಿ (ಐಸಿಎಫ್‌ಎಲ್) ಇಂದು ಕಂಪನಿಯಾಗಿ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಅಡಿ ನೋಂದಾಯಿತವಾಗಿದೆ. ಈ ಕೆಳಗೆ ವಿವರಿಸಿರುವ ಪೂರಕ ಭದ್ರತಾ ಸ್ವತ್ತುಗಳು (ಸೆಕ್ಷನ್ 13(4) ರ ಸರ್ಫೇಸಿ ಕಾಯಿದೆ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ನ್ನು ಓದಿಕೊಂಡಂತೆ ಸ್ವಾಧೀನತೆ ಪಡೆಯಲಾಗಿತ್ತು)
1. ಈ ಕೆಳಗಿನ ಶ್ರೀ ಮೀನಾಕ್ಷಿ ಸುಂದರಮ್ ರವರ ಆಸ್ತಿಯನ್ನು 15ನೇ ಡಿಸೆಂಬರ್ 2023ರಂದು ಮೀಸಲು ಬೆಲೆ ರೂ.45,00,000/- (ನಲವತ್ತೈದು ಲಕ್ಷ ರೂಪಾಯಿ ಮಾತ್ರ) ಕ್ಕೆ ಮಾರಾಟ ಮಾಡಲಾಗಿತ್ತು.
2. ಶ್ರೀ ಮುನಿಶ್ಯಾಮಪ್ಪ ರವರ ಆಸ್ತಿಯನ್ನು 13ನೇ ಫೆಬ್ರವರಿ 2024 ರಂದು ಮೀಸಲು ಬೆಲೆ ರೂ.72,00,000/- (ಎಪ್ಪತ್ತೆರಡು ಲಕ್ಷ ರೂಪಾಯಿ ಮಾತ್ರ) ಕ್ಕೆ ಮಾರಾಟ ಮಾಡಲಾಗಿತ್ತು.
ಆಸ್ತಿಯನ್ನು ಅಧಿಕೃತ ಅಧಿಕಾರಿಯವರು ಖಾಸಗಿ ಟ್ರೀಟಿ ಮೂಲಕ ನಿಯಮ 8(5ಡಿ) ನಿಯಮ 8(8)ರ ಸರ್ಫೇಸಿ ಕಾಯಿದೆ, 2002 ರ ಅಡಿ ಮಾರಾಟ ಮಾಡಿರುತ್ತಾರೆ.
ಮಾರಾಟವು "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಅದರಲ್ಲಿ ಏನಿದೆಯೋ ಹಾಗೆ", ಆಧಾರದಲ್ಲಿ ಮಾರಾಟ ಮಾಡಲಿರುವರು
ಸಾಲಗಾರ ಹೆಸರಿನ ಎದುರು ನಮೂದಿಸಿದಂತೆ ಈ ಕೆಳಗೆ ಬರಬೇಕಾದ ಬಾಕಿ ಹಣದ ವಸೂಲಿಗಾಗಿ ಆಸ್ತಿಯನ್ನು ಮಾರಾಟ ಮಾಡಲಿರುವರು.

| ಮೂಲ ಸಾಲಗಾರರ ಹೆಸರು/ಸಾಲದ ಖಾತಾ ಸಂ./ಟ್ರಸ್ಟ್ ಹೆಸರು | ಭದ್ರತಾ ಆಸ್ತಿ ವಿವರ | ನೋಟೀಸ್ ದಿನಾಂಕದವರೆಗೆ ಬಾಕಿ ಮತ್ತು ತಗಾದೆ ಮೊತ್ತ |
|---|---|---|
| ಸಾಲಗಾರ-1 : ಶ್ರೀ ಮೀನಾಕ್ಷಿ ಸುಂದರಮ್ ಬಿನ್ ಶ್ರೀ ರಾಮಮೂರ್ತಿ ನಂ. 159, ನೆಲ ಮಹಡಿ, 3ನೇ ಮೈನ್, 3ನೇ ಕ್ರಾಸ್, ಶ್ರೀಗಂಧದಕಾವಲು, ಬೆಂಗಳೂರು-560091. 2. ಶ್ರೀ ಮೀನಾಕ್ಷಿ ಸುಂದರಮ್ ಬಿನ್ ಶ್ರೀ ರಾಮಮೂರ್ತಿ, ನಂ. 741, ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ನೌಕರರ ಸಹಕಾರಿ ಗೃಹ ನಿರ್ಮಾಣ ಸಂಘ ನಿ., ಸಪ್ತಗಿರಿ ಕಾಲೇಜು ಹತ್ತಿರ, ಹೆಸರಘಟ್ಟ ಮುಖ್ಯ ರಸ್ತೆ, ಶಿಡೆಂಡಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು-560073. 3. ಶ್ರೀ ಮೀನಾಕ್ಷಿ ಸುಂದರಮ್ ಬಿನ್ ಶ್ರೀ ರಾಮಮೂರ್ತಿ, ಮೆಟ್ರೋ ಫ್ಯಾಷನ್ಸ್, ಕರಿಯೋಬನಹಳ್ಳಿ, ನಂ.1101/ಎ, ಅಂದಾನಪ್ಪ ಕಟ್ಟಡ, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಯಶವಂತಪುರ, ಬೆಂಗಳೂರು-560058. ಸಹ-ಸಾಲಗಾರ-4 : ಶ್ರೀಮತಿ ಶುಭಪ್ರಿಯ ಎಂ, ಕೋಂ ಶ್ರೀ ಮೀನಾಕ್ಷಿ ಸುಂದರಮ್, ನಂ. 159, ನೆಲ ಮಹಡಿ, 3ನೇ ಮೈನ್, 3ನೇ ಕ್ರಾಸ್, ಶ್ರೀಗಂಧದಕಾವಲು, ಬೆಂಗಳೂರು-560091. 5. ಶ್ರೀಮತಿ ಶುಭಪ್ರಿಯ ಎಂ, ಕೋಂ ಶ್ರೀ ಮೀನಾಕ್ಷಿ ಸುಂದರಮ್, ನಂ. 741, ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ನೌಕರರ ಸಹಕಾರಿ ಗೃಹ ನಿರ್ಮಾಣ ಸಂಘ ನಿ., ಸಪ್ತಗಿರಿ ಕಾಲೇಜು ಹತ್ತಿರ, ಹೆಸರಘಟ್ಟ ಮುಖ್ಯ ರಸ್ತೆ, ಶಿಡೆಂಡಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು-560073. 6. ಶ್ರೀಮತಿ ಶುಭಪ್ರಿಯ ಎಂ, ಕೋಂ ಶ್ರೀ ಮೀನಾಕ್ಷಿ ಸುಂದರಮ್, ಮೆಟ್ರೋ ಫ್ಯಾಷನ್ಸ್, ಕರಿಯೋಬನಹಳ್ಳಿ, ನಂ.1101/ಎ, ಅಂದಾನಪ್ಪ ಕಟ್ಟಡ, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಯಶವಂತಪುರ, ಬೆಂಗಳೂರು-560058. ಸಹ-ಸಾಲಗಾರ 7 : ಶ್ರೀಮತಿ ಪೂರ್ಣಿಮಾ ಡಿ, # 11, 1ನೇ ಮುಖ್ಯ ರಸ್ತೆ, 3ನೇ ಕ್ರಾಸ್, ವಿದ್ಯಾನಗರ್, ಟಿ ದಾಸರಹಳ್ಳಿ ಅಂಚೆ, ಬೆಂಗಳೂರು-560057. 8. ಶ್ರೀಮತಿ ಪೂರ್ಣಿಮಾ ಡಿ, ಮೆಟ್ರೋ ಫ್ಯಾಷನ್ಸ್, ಕರಿಯೋಬನಹಳ್ಳಿ, ನಂ.1101/ಎ, ಅಂದಾನಪ್ಪ ಕಟ್ಟಡ, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಯಶವಂತಪುರ, ಬೆಂಗಳೂರು-560058. ಸಹ-ಸಾಲಗಾರ -9 : ಮೆ॥ ಮೆಟ್ರೋ ಫ್ಯಾಷನ್ಸ್, ಕರಿಯೋಬನಹಳ್ಳಿ, ನಂ.1101/ಎ, ಅಂದಾನಪ್ಪ ಕಟ್ಟಡ, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಯಶವಂತಪುರ, ಬೆಂಗಳೂರು-560058. | ವಾಸಯೋಗ್ಯ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ದಕ್ಷಿಣದ ಭಾಗದ ಆಸ್ತಿ ನಂ. 741, ಖಾತಾ ನಂ. 741, ಸರ್ವೆ ನಂ. 13ರಲ್ಲಿದ್ದು, ಕಿರ್ಲೋಸ್ಕರ್ ಎಲೆಕ್ಟ್ರಿಸಿಟಿ ಫ್ಯಾಕ್ಟರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಲಿಮಿಟೆಡ್ ನಲ್ಲಿ ರಚಿತವಾಗಿದ್ದು, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಇತರರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಇದರ ಉತ್ತರದ ಭಾಗ, ಹುಚ್ಚಪ್ಪರವರಿಗೆ ಸೇರಿದೆ, ದಕ್ಷಿಣಕ್ಕೆ: ಸೈಟ್ ನಂ. 742, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 20 ಅಡಿ, ಒಟ್ಟು 800 ಚದರ ಅಡಿಗಳು. | 12.09.2022 ಒಟ್ಟು ಮೊತ್ತ ರೂ.60,62,412/- (ಅರುವತ್ತು ಲಕ್ಷ ಅರುವತ್ತೆರಡು ಸಾವಿರದ ನಾನ್ನೂರ ಹನ್ನೆರಡು ರೂಪಾಯಿ ಮಾತ್ರ) ಸಾಲದ ಖಾತಾ ಸಂಖ್ಯೆ: LSBGL05117-180002170 LSBGL13921-220005143 |
| ಸಾಲಗಾರ-1 : ಶ್ರೀ ಮುನಿಶ್ಯಾಮಪ್ಪ ನಂ. 92, 1ನೇ ಮೈನ್, 2ನೇ ಕ್ರಾಸ್, ಸೋಮೇಶ್ವರ ಲೇಔಟ್, ಮುನೇಶ್ವರ ದೇವಾಲಯದ ಹತ್ತಿರ, ಕಟ್ಟಿಗೇನಹಳ್ಳಿ, ಯಲಹಂಕ ಅಂಚೆ, ಬೆಂಗಳೂರು, ಕರ್ನಾಟಕ-560064. 2. ಶ್ರೀ ಮುನಿಶ್ಯಾಮಪ್ಪ ನಂ. 23, ಮುಖ್ಯ ರಸ್ತೆ, ಕಟ್ಟಿಗೇನಹಳ್ಳಿ ಮುಖ್ಯ ರಸ್ತೆ, ಜಾಲ ಹೋಬಳಿ, ಬೆಂಗಳೂರು-560064. 3. ಶ್ರೀ ಮುನಿಶ್ಯಾಮಪ್ಪ ನಂ. 92, ಸೈಟ್ ನಂ. 5 ಮತ್ತು 6, ಎಂಸಿಸಿ ನಿಲಯ, ಸೋಮೇಶ್ವರ ಲೇಔಟ್, ಕಟ್ಟಿಗೇನಹಳ್ಳಿ ಗ್ರಾಮ, ಬೆಂಗಳೂರು-560064. ಸಹ-ಸಾಲಗಾರ - 4. ಶ್ರೀಮತಿ ಸೌಮ್ಯ ನಂ. 92, 1ನೇ ಮೈನ್, 2ನೇ ಕ್ರಾಸ್, ಸೋಮೇಶ್ವರ ಲೇಔಟ್, ಮುನೇಶ್ವರ ದೇವಾಲಯದ ಹತ್ತಿರ, ಕಟ್ಟಿಗೇನಹಳ್ಳಿ, ಯಲಹಂಕ ಅಂಚೆ, ಬೆಂಗಳೂರು, ಕರ್ನಾಟಕ-560064. ಸಹ-ಸಾಲಗಾರ-5: ಮೆ॥ ಎಂ ಸಿ ಸಿ ಚಿಕನ್ ಸ್ಟಾಲ್ ನಂ. 23, ಮುಖ್ಯ ರಸ್ತೆ, ಕಟ್ಟಿಗೇನಹಳ್ಳಿ ಮುಖ್ಯ ರಸ್ತೆ, ಜಾಲ ಹೋಬಳಿ, ಬೆಂಗಳೂರು-560064. | ಸೈಟ್ ನಂ. 5: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ನಂ. 5, ಬಿಬಿಎಂಪಿ ಖಾತಾ ನಂ. 2625, ಅಸೆಸ್‌ಮೆಂಟ್ ನಂ. 2262/48/5, ಕಟ್ಟಿಗೇನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಡುತ್ತಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಇತರರ ಆಸ್ತಿ, ಪಶ್ಚಿಮಕ್ಕೆ: 30 ಅಡಿ ರಸ್ತೆ, ಉತ್ತರಕ್ಕೆ: ಆಸ್ತಿ ನಂ. 4, ದಕ್ಷಿಣಕ್ಕೆ: ಆಸ್ತಿ ನಂ. 6. ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 20 ಅಡಿ, ಒಟ್ಟು ವಿಸ್ತೀರ್ಣ 800 ಚದರ ಅಡಿ. ಸೈಟ್ ನಂ. 6: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ನಂ. 6, ಬಿಬಿಎಂಪಿ ಖಾತಾ ನಂ. 832, ಅಸೆಸ್‌ಮೆಂಟ್ ನಂ. 2247/48/46/06, ಕಟ್ಟಿಗೇನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಡುತ್ತಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಇತರರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಆಸ್ತಿ ನಂ. 5, ದಕ್ಷಿಣಕ್ಕೆ: ರಸ್ತೆ. ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 38 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 20 ಅಡಿ, ಒಟ್ಟು ವಿಸ್ತೀರ್ಣ 760 ಚದರ ಅಡಿ. | 16ನೇ ಡಿಸೆಂಬರ್ 2022 ಒಟ್ಟು ಮೊತ್ತ ರೂ.1,07,02,641/-(ಒಂದು ಕೋಟಿ ಏಳು ಲಕ್ಷ ಎರಡು ಸಾವಿರದ ಆರುನೂರ ನಲವತ್ತೊಂದು ರೂಪಾಯಿ ಮಾತ್ರ) ಸಾಲದ ಖಾತಾ ಸಂಖ್ಯೆ: LSBGL00416-170000735, LSBGL06118-190002386, LSBGL13920-210004515, LSBGL13921-220005364 |

ಈ ಮೇಲೆ ಹೆಸರಿಸಿರುವ ಸ್ವತ್ತುಗಳನ್ನು ತಿಳಿದೋ/ತಿಳಿಯದೆ ಇರುವ ಪರಭಾರೆಯಂತೆ ಮಾರಾಟ ಮಾಡಲಾಗುವುದು. ಖಾಸಗಿ ಟ್ರೀಟಿ ಮಾರಾಟವು ಕಟ್ಟುನಿಟ್ಟಾಗಿ ಅಧಿಕೃತ ಅಧಿಕಾರಿಯವರಿಂದ ರೂಪಿಸಲ್ಪಟ್ಟ ನಿಯಮ ಮತ್ತು ನಿಬಂಧನೆಗಳಂತೆ ನಡೆಯಲಿದೆ. ಆಸ್ತಿಯನ್ನು ಐಸಿಎಫ್‌ಎಲ್‌ಗೆ ತಿಳಿದೋ ತಿಳಿಯದೆಯೋ ಹಾಲಿ ಇರುವ ಹಾಗೂ ಭವಿಷ್ಯದಲ್ಲಿ ಬರಬಹುದಾದ ಪರಭಾರೆ ಸಹಿತ ಮಾರಾಟ ಮಾಡಲಾಗುವುದು. ಅಧಿಕೃತ ಅಧಿಕಾರಿ/ಪೂರಕ ಭದ್ರತಾದಾರರು ಯಾವುದೇ ರೀತಿಯ ಮೂರನೆ ವ್ಯಕ್ತಿಯ ಕ್ಲೈಮು/ಹಕ್ಕುಗಳು/ಬಾಕಿಯನ್ನು ಖಾಸಗಿ ಟ್ರೀಟಿ ಮಾರಾಟ ದಿನಾಂಕದ ನಂತರ ಬಂದಲ್ಲಿ ಅವರು ಜವಾಬ್ದಾರಿಯಾಗಿರುವುದಿಲ್ಲ.

ಸ್ಥಳ: ಬೆಂಗಳೂರು, ದಿನಾಂಕ: 27.03.2024
ಸಹಿ/-
ಅಧಿಕೃತ ಅಧಿಕಾರಿ